ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ

ಸಿಸಿ.ನಂ.98/2023

ಸಾಕ್ಷಿಯ ಹೆಸರುಃ ಮೂರ್ತಪ್ಪ ಚಾಸಾಃ 6

ತಂದೆಯ ಹೆಸರುಃ ಲೇಟ್ ತಿಮ್ಮಪ್ಪ ಪ್ರಾಸಾಃ 3

ವಯಸ್ಸುಃ 54 ವರ್ಷ

ಉದ್ಯೋಗಃ ಎ ಎಸ್ ಐ., ಅಜ್ಜಂಪುರ

ವಾಸಃ ಅಜ್ಜಂಪುರ

ದಿನಾಂಕಃ07/01/2026 ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃ ಮುಖ್ಯ ವಿಚಾರಣೆಃಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃಃ

ನಾನು 2019 ರಿಂದ 2023 ರವರೆಗೆ ಹಾಗೂ ಶೃಂಗೇರಿ ಪೋಲಿಸ್ ಠಾಣೆಯಲ್ಲಿ ಎಎಸ್ ಐ.,ಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ನಾನು ದಿನಾಂಕಃ23/09/2022 ರಂದು ರಾತ್ರಿ 8-00 ಗಂಟೆ ಸಮಯದಲ್ಲಿ ಶೃಂಗೇರಿ ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಠಾಣಾಧಿಕಾರಿಯಾದ ಚಾಸಾ 4 ರವರು ಮಾನ್ಯ ಎ ಎಸ್ ಪಿ ಯವರ ಆದೇಶದ ಮೇರೆಗೇ ಜಯಪುರ ಪೋಲಿಸ್ ಠಾಣೆಗೆ ಹೋಗೋಣ ಎಂದಿದ್ದು ಅದರಂತೆ ನಾನು ಹಾಗೂ ಚಾಸಾ 4, ಚಾಸಾ 8, ಚಾಸಾ 7 ರವರೊಂದಿಗೆ ಇಲಾಖಾ ಜೀಪಿನಲ್ಲಿ ಜಯಪುರ ಬಸ್ ನಿಲ್ದಾಣಕ್ಕೆ ಹೋದೆವು. ಮಾನ್ಯ ಎ ಎಸ್ ಪಿ., ಹಾಗೂ ಜಯಪುರದ ಎಎಸ್ಐ., ಯಾದ ಚಾಸಾ 5 ರವರು ಬಸ್ ನಿಲ್ದಾಣದ ಬಳಿ ಬಂದರು. ಮಾನ್ಯ ಎಎಸ್ ಪಿ.,ಯವರು ಪಂಚರಾಗಿ ಚಾಸಾ 2 ಮತ್ತು 3 ರವರನ್ನು ಬರಮಾಡಿಕೊಂಡು ಜಯಪುರದ ಹೋಮ್ ಸ್ಟೇಯಲ್ಲಿ ಅಕ್ರಮವಾಗಿ ಜೂಜಾಟವಾಡುತ್ತಿರುವುದಾಗಿ ಮಾಹಿತಿ ಬಂದಿದ್ದು ಅವರೊಂದಿಗೆ ಜಯಪುರದ ಡಿಲೈಟ್ ಹೋಮ್ ಸ್ಟೇ ಬಳಿ ರಾತ್ರಿ 9-10 ಕ್ಕೆ

ಹೋದೆವು. ನಂತರ ಸದರಿ ಹೋಮ್ ಸ್ಟೇನ ಮೊದಲ ಕೊಠಡಿಯಲ್ಲಿ ಬೆಂಚುಗಳನ್ನು ಜೋಡಿಸಿ 34 ಜನ ಆಪಾದಿತರು ರೂ.5,54,140/- ಗಳನ್ನು ಪಣವಾಗಿ ಇಟ್ಟುಕೊಂಡು ಅಂದರ್ ಬಾಹರ್ ಆಡುತ್ತಿರುವುದು ಕಂಡುಬಂತು. ನಂತರ ಪಂಚರೊಂದಿಗೆ ಚಾಸಾ 1 ರವರು ದಾಳಿ ನಡೆಸಿದಾಗ 52 ಇಸ್ಪೀಟ್ ಎಲೆಗಳು, 3 ಟೇಬಲ್, 34 ಚೇರುಗಳು , 39 ಮೊಬೈಲ್ , 4 ಕಾರುಗಳು, 3 ಬೆಡ್ ಶೀಟುಗಳು ಇದ್ದು ಅವುಗಳನ್ನು ಪಂಚರ ಮೂಲಕ ಅಮಾನತು ಪಡಿಸಿಕೊಂಡು ಪಂಚರ ಸಮಕ್ಷಮ ರಾತ್ರಿ 9-30 ರಿಂದ 11-30 ರವರೆಗೂ ಮಹಜರನ್ನು ಜಯಪುರ ಠಾಣೆಯ ಚಾಸಾ 10 ರವರು ಬರೆದಿದ್ದು ಅದಕ್ಕೆ ನಾನು ಮಹಜರ್ ಅನ್ನು ಓದಿ ಸಹಿ ಮಾಡಿರುತ್ತೇನೆ. ನಂತರ ಚಾಸಾ1 ರವರು ಮುಂದಿನ ಕ್ರಮದ ಬಗ್ಗೆ ಜಯಪುರ ಠಾಣೆಗೆ ತೆರಳಿ ವರದಿ, ಮಾಲು ಮತ್ತು 34 ಜನ ಆರೋಪಿತರನ್ನು ಹಾಜರುಪಡಿಸಿದರು. ನಂತರ ಜಯಪುರ ಠಾಣೆಯಲ್ಲಿ ಸದರಿಯವರ ವಿರುದ್ಧ ಪ್ರಕರಣ ದಾಖಲಾಯಿತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಯಿತು. ಸದರಿ ದಾಖಲೆ ಮಹಜರಾಗಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ. 1(ಡಿ ) ಎಂದು ಗುರುತಿಸಲಾಯಿತು. ಹಾಗೂ ನಿಪಿ.3 ಹಾಗು 4 ಅನ್ನು ನೋಡಿ ಗುರುತಿಸುತ್ತಾರೆ. ನ್ಯಾಯಾಲಯದ ಮುಂದಿರುವ ಹಾಜರಿರುವ ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

(ಉಳಿದ ಆರೋಪಿಗಳು ಗೈರು ಹಾಜರಿದ್ದು ಅವರ ಪರವಾಗಿ ಅವರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಅವರ ಗುರುತಿನ ಬಗ್ಗೆ ಯಾವುದೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.)

ನ್ಯಾಯಾಲಯದ ಮುಂದಿರುವ ಮುದ್ದೆಮಾಲು 1 ರಿಂದ 3 ಗಳನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿಗಳ ಪರಃ ಶ್ರೀ ಹೆಚ್ ಎಸ್ ಎ., ವಕೀಲರಿಂದಃ</u>

ಚಾಸಾ 1 ರವರಿಗೆ ಫೋನ್ ಕರೆ ಬಂದಾಗ ನಾನೂ ಅವರೊಂದಿಗೆ ಇದ್ದೆನು. 5 ನಿಮಿಷಗಳಲ್ಲಿ ನಾವು ಜಯಪುರಕ್ಕೆ ಹೊರಟೆವು. ಜಯಪುರಕ್ಕೆ ಹೋಗುವಾಗ ರಾತ್ರಿ 8-40 ಸಮಯವಾಗಿತ್ತು. ಜಯಪುರ ಶೃಂಗೇರಿಯಿಂದ ಸುಮಾರು 20-22 ಕಿಮೀ ಅಂತರ ಇರುತ್ತದೆ. ನಾವು ನೇರವಾಗಿ ಜಯಪುರದ ಬಸ್ ನಿಲ್ದಾಣಕ್ಕೆ ಹೋದೆವು. ಜಯಪುರ ಬಸ್ ನಿಲ್ದಾಣಕ್ಕೆ ಬರುವಂತೆ ಚಾಸಾ 1 ರವರು ತಿಳಿಸಿದ್ದರೇ ಎಂದರೆ ನನಗೆ ತಿಳಿಸಿರಲಿಲ್ಲ, ನನ್ನ ಮೇಲಾಧಿಕಾರಿಗೆ

ತಿಳಿಸಿರಬಹುದು. ನಾವು ಬಸ್ ನಿಲ್ದಾಣಕ್ಕೆ ಹೋದ ನಂತರ ಚಾಸಾ 1 ಹಾಗೂ ಇತರರು ಬಸ್ ನಿಲ್ದಾಣಕ್ಕೆ ಬಂದರು.

ಚಾಸಾ2 ಹಾಗೂ 3 ರವರನ್ನು ಚಾಸಾ 1 ರವರು ಕರೆದುಕೊಂಡು ಬಂದಿರುತ್ತಾರೆ. ಚಾಸಾ2 ಹಾಗೂ 3 ರವರು ಸದರಿ ಸಮಯದಲ್ಲಿ ಬಸ್ ನಿಲ್ದಾಣದ ಎಡಬದಿಯಲ್ಲಿ ನಿಂತಿದ್ದರು. ನಿಮಗೆ ಚಾಸಾ 2 ಹಾಗೂ 3 ರವರ ಹೆಸರು, ವಿಳಾಸದ ಬಗ್ಗೆ ಮಾಹಿತಿ ಇರುತ್ತದೆಯೇ ಎಂದರೆ ನನಗೆ ಗೊತ್ತಿರುವುದಿಲ್ಲ. ಚಾಸಾ 2 ಮತ್ತು3 ರವರನ್ನು ಇಲಾಖಾ ವಾಹನದಲ್ಲೇ ಕರೆದುಕೊಂಡು ಹೋಗಲಾಯಿತು. ಕೃತ್ಯ ನಡೆಯಿತು ಎನ್ನಲಾದ ಸ್ಥಳಕ್ಕೆ ಒಟ್ಟು 3 ಇಲಾಖಾ ವಾಹನದಲ್ಲಿ ಹೋಗಿದ್ದೆವು. ಬಸ್ ನಿಲ್ದಾಣದಿಂದ ಹೋಮ್ ಸ್ಟೇ ಗೆ ಅರ್ಧ ಕಿಮೀ ದೂರವಾಗುತ್ತದೆ. ಸದರಿ ಹೋಮ್ ಸ್ಟೇನ ಹೊರಗೆ 5 ವಾಹನಗಳು ನಿಂತಿದ್ದವು. ಸದರಿ ಸ್ಥಳದಲ್ಲಿ ದ್ವಿಚಕ್ರ ವಾಹನಗಳು ಹಾಗೂ ಇತರ ವಾಹನಗಳು ಇದ್ದ ಬಗ್ಗೆ ನಾನು ಗಮನಿಸಿರುವುದಿಲ್ಲ. ಡಿಲೈಟ್ ಹೋಮ್ ಸ್ಟೇಯು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಉತ್ತರಕ್ಕೆ ಅದರ ಪ್ರವೇಶ ದ್ವಾರ ಇರುತ್ತದೆ. ಸದರಿ ಹೋಮ್ ಸ್ಟೇಗೆ ಹಿಂಭಾಗದಲ್ಲಿ ಬಾಗಿಲು ಇರುವ ಬಗ್ಗೆ ಹಾಗೂ ಸದರಿ ಹೋಮ್ ಸ್ಟೇಗೆ ಎಷ್ಟು ಬಾಗಿಲುಗಳು ಇರುತ್ತವೆ ಎಂದು ನಾನು ನೋಡಿರುವುದಿಲ್ಲ. ಆರೋಪಿತರು ಜೂಜಾಟವನ್ನು ಕೆಳ ಅಂತಸ್ತಿನ ಮಹಡಿಯಲ್ಲಿ ಆಡುತ್ತಿದ್ದರು. ಸದರಿ ಹೋಮ್ ಸ್ಟೇ ಒಂದೇ ಅಂತಸ್ತಿನದ್ದಾಗಿರುತ್ತದೆ. ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ನಾವು ಸಮವಸ್ತ್ರದಲ್ಲೇ ಹೋಗಿದ್ದೆವು. ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ನಾವು ಹೋದಾಗ ನಮ್ಮನ್ನು ನೋಡಿ ಆರೋಪಿತರು ಓಡಲು ಪ್ರಯತ್ನಿಸಿರುವುದಿಲ್ಲ. ರೂ.5,5,4140/- ಇತ್ತು ಎಂದು ನುಡಿದಿದ್ದು ಆ ರೀತಿ ಸದರಿ ಹಣ 3 ಟೇಬಲ್ ಗಳ ಮೇಲಿತ್ತು ಎನ್ನುತ್ತಾರೆ. ಯಾವ, ಯಾವ ಟೇಬಲ್ ನ ಮೇಲೆ ಎಷ್ಟೆಷ್ಟು ಹಣ ಇತ್ತು ಎಂದು ನನಗೆ ಹೇಳಲಾಗುವುದಿಲ್ಲ.

ನ್ಯಾಯಾಲಯದ ಮುಂದಿರುವ ಆರೋಪಿತರು ಇಂತಿಂತಹವರೇ ಹಾಗೂ ಅವರ ಹೆಸರು , ವಿಳಾಸ ನನಗೆ ಹೇಳಲಾಗುವುದಿಲ್ಲ. ವಶಕ್ಕೆ ಪಡೆಲಾಯಿತು ಎನ್ನಲಾದ ಹಣದ ಮುಖ ಬೆಲೆಯನ್ನು ನನಗೆ ಹೇಳಲಾಗುವುದಿಲ್ಲ. ನಿಪಿ.1ರ ಮಹಜರ್ ನಲ್ಲಿರುವ ಎಲ್ಲಾ ವಿಚಾರಗಳನ್ನು ನನಗೆ ಈ ಸಮಯದಲ್ಲಿ ಹೇಳಲಾಗುವುದಿಲ್ಲ ಎಂದರೆ ಸರಿ. ನಿಪಿ.1 ರಲ್ಲಿ ಮೊಬೈಲ್ ನ ಬಗ್ಗೆ ಬರೆದಿದ್ದು ಯಾವ, ಯಾವ ಕಂಪನಿಯ ಮೊಬೈಲ್ ಹಾಗೂ ಅವುಗಳ ನಂಬರ್ ಯಾವುದು ಎಂದು ನನಗೆ ಗೊತ್ತಿರುವುದಿಲ್ಲ. ನಿರ್ದಿಷ್ಟವಾಗಿ ಇಂತ ಮೊಬೈಲ್ ಇಂತ ವ್ಯಕ್ತಿಗೆ ಸೇರಿದ್ದು ಎಂಬ ಬಗ್ಗೆ ನನಗೆ ಹೇಳಲಾಗುವುದಿಲ್ಲ. ವಶಕ್ಕೆ ಪಡೆದ ವಾಹನಗಳು ಇಂತಹವರದ್ದೆ ಎಂದು ನನಗೆ ನಿರ್ದಿಷ್ಟವಾಗಿ

ಹೇಳಲಾಗುವುದಿಲ್ಲ ಎಂದರೆ ಸರಿ. ಸದರಿ ವಾಹನಗಳ ನೊಂದಣಿ ಸಂಖ್ಯೆ ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ.

ನಾವು ಸದರಿ ಹೋಮ್ ಸ್ಟೇ ಬಳಿ ಸುಮಾರು ಎರಡೂವರೆ ತಾಸುಗಳವರೆಗೂ ಇದ್ದೆವು. ಆ ಎರಡುವರೆ ತಾಸು ಸಮಯದವರೆಗೂ ಆರೋಪಿತರು ಓಡಿಹೋಗಲು ಪ್ರಯತ್ನಿಸಿರುವುದಿಲ್ಲ.

ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು1ರ ಹಣವನ್ನು ಕೃತ್ಯ ನಡೆದ ಸಮಯದಲ್ಲೇ ವಶಕ್ಕೆ ಪಡೆದ ಬಗ್ಗೇ ನಿರ್ದಿಷ್ಟ ಗುರುತಿಲ್ಲ ಎಂದರೆ ಸರಿ. ನ್ಯಾಯಾಲಯದ ಮುಂದೆ ವಶಕ್ಕೆ ಪಡೆದ ಬೆಡ್ ಶೀಟ್ ಅಥವಾ ಟೇಬಲ್ ಗಳು ಇರುವುದಿಲ್ಲ ಎಂದರೆ ಸರಿ. ನಿಪಿ.1 ರಲ್ಲಿ ಕೃತ್ಯ ನಡೆದಿದೆ ಎನ್ನಲಾದ ಸ್ಥಳದ ಅಕ್ಷಾಂಶ ಹಾಗೂ ರೇಖಾಂಶವನ್ನು ನಮೂದಿಸಲಾಗಿದ್ದು ಸದರಿ ಅಕ್ಷಾಂಶ ಹಾಗೂ ರೇಖಾಂಶವನ್ನು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ.

ನ್ಯಾಯಾಲಯದ ಮುಂದಿರುವ ಮುದ್ದೆಮಾಲು 2 ರ 52 ಇಸ್ಪೀಟ್ ಎಲೆಗಳು ಪ್ರಕರಣಕ್ಕೆ ಸೇರಿದ್ದು ಎಂಬ ಬಗ್ಗ ಯಾವುದೇ ಕುರುಹುಗಳು ಇರುವುದಿಲ್ಲ ಎಂದರೆ ಸರಿ. ವಶಕ್ಕೆ ಪಡೆಯಲಾಯಿತು ಎನ್ನಲಾದ ಮೊಬೈಲ್ ಗಳಿಗೆ ಸಂಬಂಧಿಸಿ ಮೊಬೈಲ್ ಪರಿಣತಿ ಹೊಂದಿರುವವರನ್ನು ಕರೆಸಿ ಮೌಲ್ಯದ ಬಗ್ಗ ಪರೀಶೀಲಿಸಲಾಗಿತ್ತೆ ಎಂದರೆ ನನಗೆ ಆ ಬಗ್ಗ ಮಾಹಿತಿ ಇರುವುದಿಲ್ಲ. ಯಾವ ಯಾವ ಮೊಬೈಲ್ ಗೆ ಎಷ್ಟೆಷ್ಟು ಬೆಲೆ ಇರುತ್ತದೆ ಎಂಬ ಬಗ್ಗ ನನಗೆ ಗೊತ್ತಿರುವುದಿಲ್ಲ.

ಕೃತ್ಯ ನಡೆದಿದೆ ಎನ್ನಲಾದ ದಿನ ಸ್ಥಳದಲ್ಲಿದ್ದ ಆರೋಪಿತರೆ ಈ ದಿನ ನ್ಯಾಯಾಲಯದ ಮುಂದೆ ವ್ಯಕ್ತಿಗಳಾಗಿರುತ್ತಾರೆ ಎಂದು ನನಗೆ ನಿರ್ದಿಷ್ಟವಾಗಿ ಗುರುತಿಸಲಾಗುವುದಿಲ್ಲ ಎಂದರೆ ಸರಿ. ಕೃತ್ಯ ನಡೆದಿದೆ ಎನ್ನಲಾದ ಸ್ಥಳದಿಂದ ಜಯಪುರ ಠಾಣೆಗೆ ಚಾಸಾ 1 ರವರ ಜೊತೆ ನಾನೂ ಹೋಗಿರುತ್ತೇನೆ. ವರದಿಯನ್ನು ಯಾರು ಟೈಪ್ ಮಾಡಿರುತ್ತಾರೆ ಎಂಬ ಬಗ್ಗ ನನಗೆ ಮಾಹಿತಿ ಇರುವುದಿಲ್ಲ. ಸದರಿ ವರದಿಯಲ್ಲಿರುವ ವಿಚಾರಗಳ ಬಗ್ಗ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ.

ಚಾಸಾ 7 ಹಾಗೂ 8 ರವರೊಂದಿಗೆ ನಾನು ಬಸ್ ನಿಲ್ದಾಣಕ್ಕೆ ಹೋಗಿದ್ದು ಚಾಸಾ 2 ಮತ್ತು 3 ರವರನ್ನು ಕರೆದುಕೊಂಡು ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ಹೋಗಿರುತ್ತೇನೆ ಎಂದು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೃತ್ಯ ನಡೆದಿದೆ ಎನ್ನಲಾದ

ಸ್ಥಳದಲ್ಲಿ ಯಾವುದೇ ಮಹಜರ್ ಜರುಗಿಸಿರುವುದಿಲ್ಲ ಹಾಗೂ ನಾನು ಯಾವುದೆ ಸಹಿಯನ್ನು ಸ್ಥಳದಲ್ಲಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮುದ್ದೆಮಾಲು 1 ರ ನಗದು ಹಣವನ್ನು ಕೃತ್ಯ ನಡೆದಿದೆ ಎನ್ನಲಾದ ಸ್ಥಳದಲ್ಲಿ ಚಾಸಾ1 ಹಾಗೂ ಇತರ ಸಿಬ್ಬಂದಿಗಳು ಎಣಿಸಿದೆವು. ಆರೋಪಿಗಳು ಯಾವತ್ತೂ ಸಹಾ ಹಣವನ್ನು ಪಣವಾಗಿಟ್ಟು ಅಂದರ್ ಬಾಹರ್ ಅನ್ನು ಅಕ್ರಮವಾಗಿ ಆಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಡಿಲೈಟ್ ಹೋಮ್ ಸ್ಟೇ ಒಂದು ಉತ್ತಮವಾದ ಹೆಸರು ಹೊಂದಿರುವ ಹೋಮ್ ಸ್ಟೇಯಾಗಿರುತ್ತದೆ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ. ಆರೋಪಿತರು ಯಾವತ್ತೂ ಸಹಾ ಡಿಲೈಟ್ ಹೋಮ್ ಸ್ಟೇ ಒಳಗೆ ಅಕ್ರಮವಾಗಿ ಜೂಜಾಟ ಆಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ನಿಪಿ.1 ಅನ್ನು ಠಾಣೆಯಲ್ಲಿ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಚಾಸಾ1 ರವರು ನನ್ನ ಮೇಲಾಧಿಕಾರಿಗಳಾಗಿದ್ದರಿಂದ ಅವರಿಗೆ ಸಹಾಯವಾಗಲಿ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಗಳಿಗೂ ಹಾಗೂ ನ್ಯಾಯಾಲಯದ ಮುಂದಿರುವ ಮುದ್ದೆ ಮಾಲುಗಳಿಗೂ ಹಾಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.2 ಹಾಗೂ 3 ಗಳನ್ನು ಯಾರು ತೆಗೆದಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಪಿ.2 ಮತ್ತು 3 ಗಳನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಉಳಿದ ಆರೋಪಿಗಳ ಪರಃ ಶ್ರೀ ಎಂ ಹೆಚ್ ಎಸ್ ಕೆ., , ಎಂಎಸ್ ಎನ್., ಹಾಗೂ ಬಿಎಸ್ ಎನ್., ವಕೀಲರಿಂದಃ</u>

(ಸದರಿ ಪಾಟೀ ಸವಾಲನ್ನ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.)

<u>ಮರುವಿಚಾರಣೆ ಃ ಇಲ್ಲ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಓ.

ಸಹಿ/-

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ